# ಜಿಲ್ಲಾಧಿಕಾರಿಗಳ ನ್ಯಾಯಾಲಯ, ಕೊಡಗು ಜಿಲ್ಲೆ, ಮಡಿಕೇರಿ.

ಉಪಸ್ಥಿತರು: ಮೀರ್ ಅನೀಸ್ ಅಹಮದ್ ಭಾ.ಆ.ಸೇ,
ಜಿಲ್ಲಾಧಿಕಾರಿ,
ಕೊಡಗು ಜಿಲ್ಲೆ.

ನಂ:ರೆ.ಅ/ರಿವಿಜನ್/56/2015-16 ದಿನಾಂಕ:02-05-2016

| ವಾದಿಗಳು | ಪ್ರತಿವಾದಿಗಳು |
|---|---|
| ಶ್ರೀ ಕೆ.ಎಂ. ಅಬ್ದುಲ್ ಖಾದರ್,<br>ನೆಲ್ಲಿಹುದಿಕೇರಿ ಗ್ರಾಮ,<br>ಸೋಮವಾರಪೇಟೆ ತಾಲ್ಲೂಕು. | ತಹಶೀಲ್ದಾರ್,<br>ಸೋಮವಾರಪೇಟೆ ತಾಲ್ಲೂಕು. |

ದಾವಾ ಜಮೀನು: ಸೋಮವಾರಪೇಟೆ ತಾಲ್ಲೂಕು, ರಸೂಲ್‌ಪುರ ಗ್ರಾಮದ ಸ.ನಂ 10/4ರ 5.90 ಎಕರೆ ಹಾಗೂ ಸ.ನಂ 203ರ 1.67 ಎಕರೆ.

*-*-*-*

ಪ್ರಸ್ತಾವನೆ:

ಮೇಲ್ಮನವಿದಾರರು ಕರ್ನಾಟಕ ಭೂಕಂದಾಯ ಕಾಯ್ದೆ 1964ರ ಕಲಂ 122 ಬಿ ರಡಿ ದಿನಾಂಕ: 02-06-2015ರಂದು ಸಲ್ಲಿಸಿ ಪ್ರತಿವಾದಿಗಳ ಆದೇಶ (ಹಿಂಬರಹ) ಸಂಖ್ಯೆ:ಟಿಎಸ್‌ಟಿ:ಕಂ.ನಿ:103: 2014-15, ದಿನಾಂಕ:02-01-2015ನ್ನು ಪ್ರಶ್ನಿಸಿದ್ದು, ಸದರಿ ಮೇಲ್ಮನವಿಯನ್ನು ವಿಚಾರಣೆಗೆ ಅಂಗೀಕರಿಸಿ ಮೇಲ್ಮನವಿದಾರರಿಗೆ ನೋಟೀಸು ನೀಡಿ ವಾದ ಮಂಡನೆಗೆ ಅವಕಾಶ ಕೊಟ್ಟು ವಿಚಾರಣೆಗೆ ಒಳಪಡಿಸಲಾಯಿತು.

ಮೇಲ್ಮನವಿದಾರರ ಪರ ವಕೀಲರು ದಿನಾಂಕ:02-11-2015ರಂದು ವಿಚಾರಣೆಗೆ ಹಾಜರಾಗಿ ವಾದ ಮಂಡಿಸಿದ್ದು, ಪ್ರಮುಖ ಅಂಶಗಳು ಈ ಕೆಳಕಂಡಂತಿವೆ.

1. ಮೇಲ್ಮನವಿದಾರರು ದಾವಾ ಜಮೀನಿನ ಹಕ್ಕು ಮತ್ತು ಸ್ವಾಧೀನ ಹೊಂದಿದ್ದು, ಸದರಿ ಜಮೀನಿನಲ್ಲಿ ಸುಮಾರು 15 ವರ್ಷಗಳಿಂದ ಕಾಫಿ ಬೇಸಾಯ ಮಾಡುತ್ತಿದ್ದಾರೆ.
2. ದಾವಾ ಜಮೀನಿನ ಆರ್‌ಟಿಸಿಯಂತೆ ಸಾಗು ಎಂದಿದ್ದು, ಬೆಳೆಯ ಕಾಲಂನಲ್ಲಿ ಪ್ಲಾಂಟೇಷನ್ ಜಮೀನಾಗಿ ನಮೂದಾಗಿರುತ್ತದೆ. ಮೇಲ್ಮನವಿದಾರರು ಕಾಫಿ ಬೇಸಾಯ ಮಾಡುತ್ತಿದ್ದು, ಆರ್‌ಟಿಸಿಯಲ್ಲೂ ಸಹ ಬೇಸಾಯದ ವಿವರ ಕಾಫಿ ಎಂದಿರುತ್ತದೆ.
3. ಸದರಿ ಜಮೀನಿನ ಕಂದಾಯ ದರವು ಆರ್‌ಟಿಸಿ ಮತ್ತು ಆಕಾರಬಂದಿನಂತೆ ತರಿ ಬಾಬಿನಲ್ಲಿ ದಾಖಲಾಗಿರುವುದು ಇತ್ತೀಚೆಗೆ ಮೇಲ್ಮನವಿದಾರರ ಗಮನಕ್ಕೆ ಬಂದ ಮೇರೆ, ಕಾಫಿ ಕೃಷಿಯ ಬಗ್ಗೆ

ಕಂದಾಯ ದರವನ್ನು ಮರು ನಿಗಧಿಪಡಿಸಿಕೊಂಡಿರುವಂತೆ ಪ್ರತಿವಾದಿಗಳಿಗೆ ಅರ್ಜಿ ಸಲ್ಲಿಸಲಾಗಿ, ಸದರಿಯವರು ದಾವಾ ಜಮೀನು ಈಗಾಗಲೇ ಆಕಾರಬಂದ್‌ನಲ್ಲಿ ತರಿ ಕಂದಾಯದಲ್ಲಿ ದಾಖಲಿದ್ದು, ಮತ್ತೊಮ್ಮೆ ಸದರಿ ಜಮೀನಿಗೆ ಕಂದಾಯ ನಿಗಧಿಪಡಿಸಲು ರಹಾ ಇರುವುದಿಲ್ಲವೆಂದು ತಿಳಿಸಿ ಪ್ರಶ್ನಿತ ಆದೇಶದಂತೆ ಅರ್ಜಿಯನ್ನು ತಿರಸ್ಕರಿಸಿರುತ್ತಾರೆ.

4. ವಾದಿಯವರು ದಾವಾ ಜಮೀನಿನಲ್ಲಿ ಕಾಫಿ ಬೇಸಾಯ ಮಾಡಿರುವುದು ಪ್ರತಿವಾದಿಗಳಿಗೆ ಅರಿವು ಇರುತ್ತದೆ. ಕಂದಾಯ ಪರಿಷ್ಕರಣೆಗಾಗಿ ವರದಿ ಸಲ್ಲಿಸಿ ಆದೇಶ ಪಡೆದು ಕ್ರಮ ಕೈಗೊಳ್ಳಬೇಕಾಗಿದ್ದು, ಈ ರೀತಿ ಕ್ರಮ ಕೈಗೊಂಡಿರುವುದಿಲ್ಲ. ಆದುದರಿಂದ ಈ ಪ್ರಾಧಿಕಾರದಲ್ಲಿ ಮೇಲ್ಮನವಿ ಸಲ್ಲಿಸಿರುವುದಾಗಿದೆ.

ಆದುದರಿಂದ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಮೇಲ್ಮನವಿಯನ್ನು ಅಂಗೀಕರಿಸಿ ದಾವಾ ಜಮೀನಿಗೆ ಪ್ಲಾಂಟೇಶನ್ ದರದಲ್ಲಿ ಕಂದಾಯ ನಿಗಧಿಸಿ ಕೊಡಲು ಕೋರಿದೆ.

ಮೇಲ್ಮನವಿಯ ಅಂಶ, ವಾದ ಹಾಗೂ ದಾಖಲೆಗಳನ್ನು ಪರಿಶೀಲಿಸಲಾಯಿತು. ದಾವಾ ಜಮೀನಿನ ಆರ್‌ಟಿಸಿ ಪರಿಶೀಲಿಸಲಾಗಿ ಖಾತೆಯು ಅರ್ಜಿದಾರರ ಹೆಸರಿನಲ್ಲಿದ್ದು, ಸಾಗು ನಿಬಂಧನೆಗೆ ಒಳಪಟ್ಟಿದ್ದು, ಆರ್‌ಟಿಸಿಯ 12 (9)ನೇ ಕಾಲಂನಲ್ಲಿ ಬೇಸಾಯ ಕಾಫಿ ಎಂದಿದ್ದು, ಪ್ಲಾಂಟೇಶನ್ ಎಂದು ನಮೂದಾಗಿರುತ್ತದೆ. ಮೇಲ್ಮನವಿದಾರರು ಸದರಿ ಜಮೀನನ್ನು ಸುಮಾರು 15 ವರ್ಷಗಳಿಂದ ಕಾಫಿ ಬೇಸಾಯಕ್ಕೆ ಒಳಪಡಿಸಿದ ಬಗ್ಗೆ ಕೃಷಿ ಅಧಿಕಾರಿ, ರಥ ಸಂಪರ್ಕ ಕ್ಷೇತ್ರ, ಕುಶಾಲನಗರ ಇವರು ದಿನಾಂಕ: 21-10-2014ರಂದು ದೃಢೀಕರಣ ಪತ್ರ ನೀಡಿರುವುದು ಹಾಜರುಪಡಿಸಿದ ದಾಖಲೆಗಳಿಂದ ಕಂಡು ಬಂದಿರುತ್ತದೆ.

ಅಲ್ಲದೇ, ಕುಶಾಲನಗರ ಕಂದಾಯ ಪರಿವೀಕ್ಷಕರು ತಹಶೀಲ್ದಾರರಿಗೆ ಸಲ್ಲಿಸಿದ ವರದಿಯಿಂದಲೂ ದೃಢಪಟ್ಟಿರುತ್ತದೆ. ಆದರೆ ಜಮೀನಿನ ಆರ್‌ಟಿಸಿಯಂತೆ ಕಂದಾಯ ದರವು ಖುಷ್ಕಿ ಬಾಬಿನಲ್ಲಿರುತ್ತದೆ. ಕರ್ನಾಟಕ ಭೂಕಂದಾಯ ಕಾಯ್ದೆ 1964ರ ಕಲಂ 122 ಬಿ (II)ರಂತೆ ಈಗಾಗಲೇ ನಿಗಧಿಸಿರುವ ಕಂದಾಯವನ್ನು ಪರಿಷ್ಕರಿಸಿ ಮರು ನಿಗಧಿಸಲು ಜಿಲ್ಲಾಧಿಕಾರಿಯವರಿಗೆ ಅಧಿಕಾರ ವ್ಯಾಪ್ತಿ ಇದ್ದು, ಆರ್‌ಟಿಸಿಯಲ್ಲಿನ ಬೆಳೆ ವಿವರ, ಕಂದಾಯ ಪರಿವೀಕ್ಷಕರ ವರದಿ ಹಾಗೂ ಕೃಷಿ ಅಧಿಕಾರಿಯವರು ನೀಡಿರುವ ದೃಢೀಕರಣ ಪತ್ರದಿಂದ ದಾವಾ ಜಮೀನು ಹಿಂದಿನಿಂದಲೇ ಕಾಫಿ ಸಾಗುವಳಿಗೆ ಒಳಪಟ್ಟಿರುವುದು ದೃಢಪಟ್ಟಿರುವುದರಿಂದ ಈ ಕೆಳಕಂಡಂತೆ ಆದೇಶಿಸಿದೆ.

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಮೇಲ್ಮನವಿಯನ್ನು ಅಂಗೀಕರಿಸಿ ದಾವಾ ಜಮೀನಿಗೆ ಪ್ಲಾಂಟೇಶನ್ ದರದಲ್ಲಿ ಕಂದಾಯ ನಿಗಧಿಸಿ ಆದೇಶಿಸಿದೆ. ತಹಶೀಲ್ದಾರ್, ಸೋಮವಾರಪೇಟೆ ತಾಲ್ಲೂಕು ರವರು ಈ ಆದೇಶದಂತೆ ಅಗತ್ಯ ಕ್ರಮ ಜರುಗಿಸುವುದು.

ಈ ಆದೇಶವನ್ನು ದಿನಾಂಕ:02-05-2016ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಿದೆ.

ಜಿಲ್ಲಾಧಿಕಾರಿ,
ಕೊಡಗು ಜಿಲ್ಲೆ, ಮಡಿಕೇರಿ.